ಅಧಿಕಾರಿಗಳಿಗೆ ಇದಾದ ಒಂದೆರಡು ತಿಂಗಳಲ್ಲಿಯೇ ಅಬಕಾರಿ ಉಪ ಆಯುಕ್ತರಾಗಿ ಪದೋನ್ನತಿ ನೀಡುವ ಔಚಿತ್ಯವಾದರೂ ಏನು,

ಉ) ರಾಜ್ಯದ ರಾಜಸ್ವದ ದೃಷ್ಟಿಯಿಂದ ಈ ಹುದ್ದೆಗಳನ್ನು ತುಂಬಲೇ ಬೇಕಾಗಿದ್ದಲ್ಲಿ ಕೆ.ಎ.ಎಸ್. ವೃಂದದಿಂದ ಪ್ರತಿ ನಿಯೋಜನೆ ಮೇಲೆ ನೇಮಿಸಬಹುದಿತ್ತಲ್ಲವೆ, ಈ ರೀತಿ ಆರ್ಥಿಕ ಹೊರೆಗೆ ಕಾರಣವಾಗಿರುವ ಇಲಾಖೆಯ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಎಂಟು.

ಆ) ನಿಯಮಗಳನ್ನು ಪಾಲಿಸಲಾಗಿದೆ.

ಇಲ್ಲ

ಇ) ಹೌದು. ಅಬಕಾರಿ ಉಪ ಆಯುಕ್ತರ ಹುದ್ದೆಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಅಬಕಾರಿ ಅಧೀಕ್ಷಕ ವೃಂದದಲ್ಲಿ ಕನಿಷ್ಟ 5 ವರ್ಷಗಳ ಸೇವೆ ಸಲ್ಲಿಸಿರುವ ಅಧಿಕಾರಿಗಳಿಗೆ ಪದೋನ್ನತಿ ನೀಡುವ ಮೂಲಕ ತುಂಬಬೇಕಾಗುವುದು. ಆದರೆ ಕನಿಷ್ಟ ಸೇವಾವಧಿಯನ್ನು ಪೂರ್ಣಗೊಳಿಸಿದ ಅಧಿಕಾರಿಗಳ ಕೊರತೆ ಇದ್ದುದರಿಂದ ಮತ್ತು ಸದರಿ ಖಾಲಿ ಹುದ್ದೆಗಳನ್ನು ರಾಜಸ್ವ ಮತ್ತು ಇಲಾಖೆಯ ಆಡಳಿತದ ಹಿತದೃಷ್ಟಿಯಿಂದ ತುಂಬಬೇಕಾದ ಅನಿವಾರ್ಯತೆ ಇದ್ದ ಕಾರಣ, 2-8-1993ರಿಂದ ನಿಯಮ 32ರಡಿ ಅಬಕಾರಿ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದು, 31-8-1998ರಲ್ಲಿ ಸ್ಥಾನಪನ್ನಗೊಳಿಸಲಾಗಿದ್ದ ಕೆಲವು ಅಧಿಕಾರಿಗಳು ಅಬಕಾರಿ ಅಧೀಕ್ಷಕರಾಗಿ ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿ ಕಾರ್ಯರ್ವಹಿಸಿದ್ದ ಅವಧಿಯನ್ನು ಪರಿಗಣಿಸಿದಲ್ಲಿ ಅಬಕಾರಿ ಉಪ ಆಯುಕ್ತರ ಹುದ್ದೆಗೆ ಪದೋನ್ನತಿ ಹೊಂದಲು ಅರ್ಹತೆ ಪಡೆಯುವರೆಂಬ ಅಂಶದ ಹಿನ್ನೆಲೆಯಲ್ಲಿ ಅವರನ್ನು ದಿನಾಂಕ 22-2-2002ರ ಸರ್ಕಾರದ ಅಧಿಸೂಚನೆಯಲ್ಲಿ ಕ.ನಾ.ಸೇ. (ಆರ್.ಪಿ.ಸಿ ಮತ್ತು ಪಿ) ನಿಯಮಗಳು, 1978ರ ನಿಯಮ 2(3)ರನ್ವಯ ಪೂರ್ವಾನ್ವಯವಾಗಿ ಸ್ಥಾನಪನ್ನಗೊಳಿಸಲಾಗಿದೆ. ನಂತರ ಅವರಿಗೆ ದಿನಾಂಕ 28-5-2002ರಂದು ಅಬಕಾರಿ ಉಪ ಆಯುಕ್ತರ ವೃಂದಕ್ಕೆ ಪದೋನ್ನತಿ ನೀಡಲಾಗಿದೆ. ಇದರಿಂದ ಸರ್ಕಾರಕ್ಕೆ ಅನಾವಶ್ಯಕ ವೆಚ್ಚವಾಗಿಲ್ಲ.

ಉ) ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಅಬಕಾರಿ ಉಪ ಆಯುಕ್ತರ ಹುದ್ದೆಗಳನ್ನು ಅಬಕಾರಿ ಅಧೀಕ್ಷಕ ವೃಂದದಿಂದ ಪದೋನ್ನತಿ ಮೂಲಕ ತುಂಬಬೇಕಾಗಿದ್ದು, ಅದರ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. ಹೆಚ್ಚಿನ ಆರ್ಥಿಕ ಹೊರೆ ಉಂಟಾಗಿಲ್ಲ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಅಧಿಕಾರಿಗಳನ್ನು ಮಾತೃ ಇಲಾಖೆಗೆ ಕಳುಹಿಸಿದ್ದರೂ ವೇತನ ನೀಡಿರುವುದು

1598 (1905) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಪವರ್ ಟ್ರಾನ್ಸ್‌ಮೀಷನ್ ಕಾರ್ಪೊರೇಷನ್‌ನಲ್ಲಿ ಚೀಫ್ ಫೈನಾನ್ಸಿಯಲ್ ಅಡ್‌ವೈಸರ್ ಇವರನ್ನು ಇವರ ಮಾತೃ ಇಲಾಖೆಗೆ ದಿನಾಂಕ 11-1-2002ರಂದು ವಾಪಸ್ಸು ಕಳುಹಿಸಿರುವುದು ನಿಜವೇ;

ಆ) ದಿನಾಂಕ : 11-1-2002ರಂದೇ ಕೆ.ಪಿ.ಟಿ.ಸಿ.ಎಲ್ ಸೇವೆಯಿಂದ ಇವರನ್ನು ಬಿಡುಗಡೆ ಮಾಡಿದ್ದರೂ ಇವರಿಗೆ 31-5-2002ರವರೆಗೆ ಕೆ.ಪಿ.ಟಿ.ಸಿ.ಎಲ್ ಸಂಬಳ ನೀಡಿದ್ದು, ಕೆ.ಪಿ.ಟಿ.ಸಿ.ಎಲ್.ನ ಕಾರನ್ನು ಬಳಸಲು ಅವಕಾಶ ನೀಡಿರುವುದು ನಿಜವೆ;

ಇ) ಹಾಗಿದ್ದರೆ ಈ ರೀತಿ ಅಧಿಕಾರ ದುರಪಯೋಗ ಮಾಡಿದ ಅಧಿಕಾರಿಯ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; ಇಲ್ಲದಿದ್ದರೆ ಕಾರಣಗಳೇನು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ನಿಗಮದ ಆದೇಶ ಸಂಖ್ಯೆ. ಹಿ.ಸ. 3 : 77 : 86-87 : 11-1-2002ರಲ್ಲಿ ಮುಖ್ಯ ಆರ್ಥಿಕ ಸಲಹೆಗಾರರ ಸೇವೆಯನ್ನು ಅವರ ಮಾತೃ ಇಲಾಖೆಗೆ (ರೈಲ್ವೇಸ್) ಹಿಂದಿರುಗಿಸಲಾಗಿತ್ತು. ಆದರೆ ಅವರ ಮಾತೃ ಇಲಾಖೆಯವರು ಮರು ಸ್ಥಳ ನಿಯುಕ್ತಿ ಆದೇಶ ನೀಡಿರಲಿಲ್ಲವಾದ್ದರಿಂದ ಮತ್ತು ಅವರ ಎರವಲು ಸೇವೆಯ ಅವಧಿ ಮೇ 2002 ರವರೆಗೆ ಇದ್ದುದರಿಂದ ಸೇವೆಯಿಂದ ಬಿಡುಗಡೆ ಹೊಂದಿರಲಿಲ್ಲ.

ಆ) ಅವರ ಮಾತೃ ಇಲಾಖೆಯಿಂದ ಮರು ಸ್ಥಳ ನಿಯುಕ್ತಿ ಆದೇಶ ಮೇ ತಿಂಗಳಿನಲ್ಲಿ ಬಂದ ನಂತರ ಕಾರ್ಯಭಾರ ವರದಿ ಸಂಖ್ಯೆ : ಆಆ (ಆ) ವಿ-1 : 3609, ದಿನಾಂಕ : 31-5-2002ರ ಪ್ರಕಾರ ಮುಖ್ಯ ಆರ್ಥಿಕ ಸಲಹೆಗಾರರು 31-5-2002 ರಂದು ಕಾರ್ಯದಿಂದ ಬಿಡುಗಡೆ ಹೊಂದಿರುತ್ತಾರೆ. ಆದ್ದರಿಂದ ಅವರಿಗೆ 31-5-2002 ರವರೆಗೆ ಸಂಬಳವನ್ನು ನೀಡಿದೆ ಮತ್ತು ಕಾರನ್ನು ಬಳಸಲು ಅವಕಾಶ ನೀಡಿತು.

ಇ) ಮೇಲಿನ ಕಾರಣಗಳಿಂದ ಅಧಿಕಾರ ದುರಪಯೋಗದ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯ ಸರ್ಕಾರಿ ಕಛೇರಿ, ಉದ್ದಿಮೆಗಳಲ್ಲಿ ಉದ್ಯೋಗ ನೀತಿ

1599 (1906) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ಕಛೇರಿ ಉದ್ದಿಮೆಗಳಲ್ಲಿನ 'ಸಿ' ಮತ್ತು 'ಡಿ' ದರ್ಜೆ ಹುದ್ದೆಗಳನ್ನು ಸ್ಥಳೀಯ ಉದ್ಯೋಗ ವಿನಿಮಯ ಕೇಂದ್ರಗಳ ಮುಖಾಂತರ ಭರ್ತಿ ಮಾಡಲಾಗುತ್ತಿದೆಯೇ;

ಆ) ಮಾಧ್ಯಮಗಳ ಮೂಲಕ ಪ್ರಕಟಣೆ ನೀಡಿ ಸರ್ಕಾರಿ ಹುದ್ದೆಗಳನ್ನು ತುಂಬುವುದರಿಂದ ಅನ್ಯ ರಾಜ್ಯಗಳ ಅಭ್ಯರ್ಥಿಗಳಿಗೆ ರಾಜ್ಯ ಸರ್ಕಾರಿ ಕಛೇರಿಗಳ ಹುದ್ದೆಗಳಿಗೆ ನೇರ ನೇಮಕಾತಿ ಹೊಂದಲು ಹೇರಳ ಅವಕಾಶ ನೀಡಿದಂತಾಗಲಿಲ್ಲವೇ;

ಇ) ಸರ್ವೋಚ್ಚ ನ್ಯಾಯಾಲಯದ ತೀರ್ಪಿದ್ದರೂ ಸಹ ಪಶ್ಚಿಮ ಬಂಗಾಳ ಸರ್ಕಾರ ಹೊಸ ಉದ್ಯೋಗ ನೀತಿಯನ್ನು ರೂಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸ್ಥಳೀಯರಿಗೆ ಉದ್ಯೋಗ ನೆರವಿನ ಪಶ್ಚಿಮ ಬಂಗಾಳದ ನೀತಿಯನ್ನು ರಾಜ್ಯದಲ್ಲೂ ರೂಪಿಸಲು ಇರುವ ಅನಾನುಕೂಲವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ದಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಸ್ (ಕಂಪಲ್ಸರಿ ನೋಟಿಫಿಕೇಷನ್ ಆಫ್ ವೇಕೆನ್ಸೀಸ್) ಆಕ್ಟ್, 1959 ಇದು ಅದರ ಪರಿಚ್ಛೇದ 2 (ಎಫ್) ನಲ್ಲಿ ಉಲ್ಲೇಖಿಸಿದ ಸರ್ಕಾರಿ ವಲಯದ ಸಂಸ್ಥೆಗಳಿಗೂ ಅನ್ವಯವಾಗ ಬಹುದಾಗಿದ್ದು, ಅದನ್ನು ಈ ಕೆಳಗೆ ಉದ್ದರಿಸಲಾಗಿದೆ:-